OS 222 /2021 PW-1

**ದಿನಾಂಕಃ 23-01-2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದಃ**

1. ದಾವಾ ಸ್ವತ್ತುಗಳನ್ನು ಹೊರತು ಪಡಿಸಿ , ನಾವು ವಾಸಿಸುತ್ತಿರುವ ತಾವರೆಕೆರೆಯ ಮನೆ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ. ತಾವರೆಕೆರೆ ಗ್ರಾಮಕ್ಕೆ ಸೇರಿದ ಸ.ನಂ.196/2 ರಲ್ಲಿ 34 ಗುಂಟೆ 1 ನೇ ಪ್ರತಿವಾದಿ ಕೆಂಚಮ್ಮನ ಹೆಸರಿಗೆ ಪವತಿವಾರಸುದಾರ ಅಧಾರದ ಮೇಲೆ ಪಹಣಿಯಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಪಹಣಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಡಿ-1** ಎಂದು ಗುರುತಿಸಲಾಯಿತು. ಸದರಿ ಜಮೀನು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ.

2. ಸದರಿ ಮನೆ ಮತ್ತು ಜಮೀನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ನನ್ನ ಜನನ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಮುಂದುವರೆದು ಸಾಕ್ಷಿಯು ನಾನು ದಿಃ 20-07-1990 ರಲ್ಲಿ ಹುಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಜಮೀನು ಮಾರಾಟ ಮಾಡುವ ಮೊದಲೇ ನಾನು ಹುಟ್ಟಿದ್ದೇ ಎಂದರೆ ಸರಿಯಲ್ಲ. ನನ್ನ ದಾವೆಗೆ ಅನುಕೂಲವಾಗಲೆಂದು ಸುಳ್ಳು ಜನ್ಮ ದಿನಾಂಕ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ತಂದೆ ಮರಣಹೊಂದುವವರೆಗೂ ಅವರೇ ಮನೆ ಯಜಮಾನಿಕೆ ಮಾಡುತ್ತಿದ್ದರು ಎಂದರೆ ಸರಿ. ನನಗೆ ಸಾಕಿ , ನನ್ನ ತಾಯಿಗೆ ನೋಡಿಕೊಂಡು ಮನೆಯ ನಿರ್ವಹಣೆಯನ್ನು ನನ್ನ ತಂದೆಯವರೇ ಮಾಡುತ್ತಿದ್ದರು ಎಂದರೆ ಸರಿ. 2 ನೇ ಪ್ರತಿವಾದಿಯಿಂದ ಹಣ ಕಬಳಿಸಲು ಮತ್ತು ತೊಂದರೆ ಕೊಡುವ ಸಲುವಾಗಿ ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನನ್ನ ತಂದೆಯವರು ನ್ಯಾಯಬದ್ಧ ಅವಶ್ಯಕತೆ ಹಾಗೂ ಕುಟುಂಬಾರ್ಥೆ ಗಾಗಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

OS 222 /2021 PW-1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.